ಇ) ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಕೇವಲ ತಗ್ಗುಗಳನ್ನು ಮಾತ್ರ ತುಂಬುತ್ತಿದ್ದು, ಇದು ಪೂರ್ಣ ಡಾಂಬರೀಕರಣ ಮಾಡಲು ಕ್ರಮ ಕೈಗೊಳ್ಳುವರೇ;

ಈ) ಈ ರಸ್ತೆ ಎಲ್ಲಮ್ಮನ ದೇವಸ್ಥಾನಕ್ಕೆ ಹೋಗುವ ಹಾಗೂ ಶ್ರೀ ಕ್ಷೇತ್ರ ಸೋಗಲಕ್ಕೆ ಹೋಗುವ ರಸ್ತೆ ಸಹ ಆಗಿದ್ದು, ಇಲ್ಲಿ ಹೆಚ್ಚಿನ ದಟ್ಟಣೆ ಇದ್ದು ಕೂಡಲೇ ಈ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಸರ್ಕಾರದವರು 30 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವರೇ ಹಾಗೂ ಎಷ್ಟು ದಿವಸಗಳಲ್ಲಿ ಈ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಕಾಣುವಂತೆ ಮಾಡಲಾಗುವುದು?

ಶ್ರೀ ಕೆ.ಜೆ. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಬಂದಿದೆ.

ಇ) ಅನುದಾನದ ಲಭ್ಯತೆಯನ್ನು ಅನುಸರಿಸಿ ಮರು ಡಾಂಬರೀಕರಣವನ್ನು ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಈ) ಈ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾಪವನ್ನು ಪರಿಶೀಲಿಸಲಾಗುವುದು. ಈ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ವಿಷಯವು ಪರಿಶೀಲನೆಯಲ್ಲಿರುವುದಿಲ್ಲ.

ಮೂಡಿಗೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಮತ್ತು ಜಿಲ್ಲಾ ಪರಿಷತ್ ವ್ಯಾಪ್ತಿಗೊಳಪಡುವ ರಸ್ತೆಗಳು

231 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ಮತ್ತು ಜಿಲ್ಲಾ ಪರಿಷತ್ ವ್ಯಾಪ್ತಿಗೊಳಪಡುವ ರಸ್ತೆಗಳ ಉದ್ದವೆಷ್ಟು;

ಆ) ಅವುಗಳಲ್ಲಿ ಎಷ್ಟು ಕಿಮೀ ಉದ್ದದ ರಸ್ತೆಗೆ ಡಾಂಬರೀಕರಣ ಮಾಡಲಾಗಿದೆ;

ಇ) ಇನ್ನೂ ಡಾಂಬರೀಕರಣ ಮಾಡದಿರುವ ರಸ್ತೆ ಎಷ್ಟು;

ಈ) ಆ ರಸ್ತೆಗಳ ಅಭಿವೃದ್ಧಿಗೆ ಎಷ್ಟು ಹಣ ಒದಗಿಸಲಾಗುತ್ತಿದೆ. (ಕಿ.ಮೀ. ಒಂದಕ್ಕೆ)?

ಶ್ರೀ ಕೆ.ಜೆ. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಮೂಡಿಗೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ರಸ್ತೆಗಳ ವಿವರ ಕೆಳಕಂಡಂತಿದೆ.

ಲೋಕೋಪಯೋಗಿ ಇಲಾಖೆ ವ್ಯಾಪ್ತಿ

ರಾಜ್ಯ ಹೆದ್ದಾರಿ	148.70 ಕಿಮೀ
ಮುಖ್ಯ ಜಿಲ್ಲಾ ರಸ್ತೆ	134.30 ಕಿಮೀ
	283.00 ಕಿಮೀ

ಜಿಲ್ಲಾ ಪಂಚಾಯತ್ ವ್ಯಾಪ್ತಿ

ಹಳ್ಳಿ ದರ್ಜೆ ರಸ್ತೆ ಹಾಗೂ ತಾಲ್ಲೂಕು ಬೋರ್ಡ್‌ರಸ್ತೆಗಳು 593.00 ಕಿಮೀ

ಆ) ಡಾಂಬರೀಕರಣ ಮಾಡಿರುವ ರಸ್ತೆಗಳ ಉದ್ದ ಕೆಳಕಂಡಂತಿದೆ.

ಲೋಕೋಪಯೋಗಿ ಇಲಾಖೆ ವ್ಯಾಪ್ತಿ	:	257.00 ಕಿ.ಮೀ.
ಜಿಲ್ಲಾ ಪಂಚಾಯತ್ ವ್ಯಾಪ್ತಿ	:	96.00 ಕಿ.ಮೀ.

ಇ) ಇನ್ನೂ ಡಾಂಬರೀಕರಣವಾಗದಿರುವ ರಸ್ತೆಗಳ ಉದ್ದ ಕೆಳಕಂಡಂತಿದೆ.

ಲೋಕೋಪಯೋಗಿ ಇಲಾಖೆ ವ್ಯಾಪ್ತಿ	:	26.00 ಕಿಮೀ
ಜಿಲ್ಲಾ ಪಂಚಾಯತ್ ವ್ಯಾಪ್ತಿ	:	947.00 ಕಿಮೀ

ಈ) ಪ್ರತಿ ಕಿ.ಮೀ. ರಸ್ತೆಗಳ ನಿರ್ವಹಣೆ ವಿಶೇಷ ದುರಸ್ತಿ ಹಾಗೂ ನವೀಕರಣಕ್ಕಾಗಿ ಒದಲಿಸಲಾಗುತ್ತಿರುವ ಅನುದಾನ ಕೆಳಕಂಡಂತಿದೆ

ರಾಜ್ಯ ಹೆದ್ದಾರಿ	:	15000.00 ರೂ. ಪ್ರತಿ ಕಿ.ಮೀಗೆ
ಜಿಲ್ಲಾ ಮುಖ್ಯ ರಸ್ತೆ	:	12500.00 ರೂ. ಪ್ರತಿ ಕಿ.ಮೀ ಗೆ
ಹಳ್ಳಿದರ್ಜೆ ರಸ್ತೆಗಳು	:	6450.00 ರೂ. ಪ್ರತಿ ಕಿ.ಮೀ ಗೆ.

ಲೋಕೋಪಯೋಗಿ ಇಲಾಖೆಯಿಂದ ಸಚಿವರ ಮನೆಗಳ ನವೀಕರಣಕ್ಕಾಗಿ ವೆಚ್ಚ ಮಾಡಿರುವ ಹಣ

186 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ನಾಲ್ಕು ವರ್ಷಗಳಲ್ಲಿ ಆಗಿನ ಮತ್ತು ಇಂದಿನ ಮಂತ್ರಿಮಂಡಲದ ಸಚಿವರ ಮನೆಗಳ ದುರಸ್ಥಿ ಹಾಗೂ ನವೀಕರಣಕ್ಕಾಗಿ ಪ್ರತಿ ವರ್ಷ ವೆಚ್ಚ ಮಾಡಲಾದ ಹಣವೆಷ್ಟು (ಮಂತ್ರಿವಾರು ವಿವರಗಳನ್ನು ಒದಗಿಸುವುದು)

ಆ) ಈ ಕೆಲಸಗಳನ್ನು ಇಲಾಖೆಯವರೇ ನಿರ್ವಹಿಸುವರೆ? ಇಲ್ಲವೆ ಗುತ್ತಿಗೆದಾರರು ನಿರ್ವಹಿಸುವರೆ?

ಇ) ಈ ಗುತ್ತಿಗೆ ಕೆಲಸಗಳನ್ನು ಕಳೆದ ನಾಲ್ಕು ವರ್ಷಗಳಲ್ಲಿ ಯಾರು ಯಾರಿಗೆ ನೀಡಲಾಗಿದೆ?

ಈ) ಈ ಕೆಲಸಗಳ ನಿರ್ವಹಣೆಗೆ ಟೆಂಡರ್ ಕರೆಯಲಾಗಿತ್ತೆ ಇಲ್ಲವೆ, ಕೊಟೇಷನ್ಗಳನ್ನು ಪಡೆಯಲಾಗಿತ್ತೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಇಲಾಖೆ) :

ಅ) ಕಳೆದ ನಾಲ್ಕು ವರ್ಷಗಳಲ್ಲಿ ಪ್ರತಿ ವರ್ಷ ಖರ್ಚು ಮಾಡಿದ ವಿವರ ಹೀಗಿದೆ.

ವರ್ಷ	ಖರ್ಚು ಮಾಡಿದ ಹಣ. ಲಕ್ಷ ರೂ.ಗಳಲ್ಲಿ
1990-91	37.83
1991-92	19.29
1992-93	48.88
1993-94	26.26
ಒಟ್ಟು	132.26

ಆ) ಗುತ್ತಿಗೆದಾರರ ಮೂಲಕ ನಿರ್ವಹಿಸಲಾಗಿದೆ.

ಇ) ಲಗತ್ತಿಸಿರುವ ಅನುಬಂಧದಲ್ಲಿ ವಿವರ ನೀಡಿದೆ.

ಈ) ಬಹುತೇಕ ಕೆಲಸಗಳನ್ನು ತುಂಡು ಗುತ್ತಿಗೆ ಆಧಾರದ ಮೇಲೆ ಕೈಗೊಳ್ಳಲಾಗಿದೆ. ಕೆಲವು ಕೆಲಸಗಳನ್ನು ಟೆಂಡರ್ ಮೇಲೆ ತೆಗೆದುಕೊಂಡಿದೆ. ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ಕೊಟ್ಟಿದೆ.